ಬೆಳಗಾಂ ಜಿಲ್ಲೆಯಲ್ಲಿನ ಸೀಮೆಎಣ್ಣೆ ಅಭಾವದ ಬಗ್ಗೆ

1995. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾಂ ಜಿಲ್ಲೆಯಲ್ಲಿ ಸೀಮೆಎಣ್ಣೆ ಹಾಗೂ ಪಾಮ್ ಆಯಿಲ್ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಹಾಗಿದ್ದಲ್ಲಿ ಈ ವಿತರಣೆಯನ್ನು ಸರಿಯಾಗಿ ಮಾಡಲು ಸರ್ಕಾರವು ಕೈಗೊಂಡ ಕ್ರಮವೇನು :

ಇ) ಬೆಳಗಾಂ ಜಿಲ್ಲೆಗೆ ಬೇಕಾಗಿರುವ ಸೀಮೆ ಎಣ್ಣೆ ಮತ್ತು ಪಾಮ್ ಆಯಿಲ್ ಪ್ರಮಾಣವೆಷ್ಟು ಮತ್ತು ಸರ್ಕಾರದಿಂದ ಬಿಡುಗಡೆ ಮಾಡುವ ಪ್ರಮಾಣವೆಷ್ಟು :

ಈ) ಬೈಲಹೊಂಗಲ ನಗರದಲ್ಲಿ ಹಾಗೂ ತಾಲ್ಲೂಕಿನಲ್ಲಿ ಸೀಮೆಎಣ್ಣೆ ಕೊರತೆ ಇದ್ದು ಸಂಗತಿ ಸರ್ಕಾರದ ಗಮಕ್ಕೆ ಬಂದಿದೆಯೇ :

ಉ) ಹಾಗಿದ್ದಲ್ಲಿ. ಕೊರತೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಜಿಲ್ಲೆಯಲ್ಲಿ ಸೀಮೆಎಣ್ಣೆ ಕೊರತೆ ಇಲ್ಲ. ಆದರೆ ಕೇಂದ್ರ ಸರ್ಕಾರದಿಂದ ಸಾಕಷ್ಟು ಪ್ರಮಾಣದ ಹಂಚಿಕೆ ಆಗದೇ ಇರುವುದರಿಂದಾಗಿ ಪಾಮೋಲಿನ್ ಎಣ್ಣೆ ಕೊರತೆ ಇದೆ.

ಆ) ಪಡಿತರ ಚೀಟಿಗಳ ಮೂಲಕ ಸೀಮೆಎಣ್ಣೆ ಹಾಗೂ ಪಾಮೋಲಿನ್ ಎಣ್ಣೆಯನ್ನು ಹಂಚಲಾಗುತ್ತಿದೆ. ತಪ್ಪಿತಸ್ಥ ವರ್ತಕರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ತಿಂಗಳ ಅವಶ್ಯಕತೆ :

1) ಸೀಮೆಎಣ್ಣೆ 3800 ಕಿ.ಲೀ.

2) ಪಾಮೋಲಿನ್ ಎಣ್ಣೆ 650.0 ಮೆ.ಟನ್

ತಿಂಗಳ ಹಂಚಿಕೆ :

	ಸೀಮೆಎಣ್ಣೆ	ಪಾಮೋಲಿನ್ ಎಣ್ಣೆ
ನವೆಂಬರ್-91	3270 ಕಿ.ಲೀ.	162 ಮೆ.ಟನ್
ಡಿಸೆಂಬರ್-91	3270 ಕಿ.ಲೀ.	-
ಜನವರಿ-92	3270 ಕಿ.ಲೀ.	-
ಫೆಬ್ರುವರಿ-92	3845 ಕಿ.ಲೀ.	150 ಮೆ.ಟನ್
ಮಾರ್ಚ್-92	4036 ಕಿ.ಲೀ.	

ಈ) ಕೇಂದ್ರ ಸರ್ಕಾರದಿಂದ ಸಾಕಷ್ಟು ಪ್ರಮಾಣದ ಹಂಚಿಕೆ ಆಗದೇ ಇದ್ದುದರಿಂದ ಕೊರತೆ ಇತ್ತು.

ಉ) ರಾಜ್ಯಕ್ಕೆ ಹೆಚ್ಚಿನ ಪ್ರಮಾಣದ ಸೀಮೆಎಣ್ಣೆ ಹಂಚಿಕೆ ಮಾಡಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ಅವರು ಹೆಚ್ಚಿನ ಪ್ರಮಾಣ ನೀಡಿದರೆ ಬೆಳಗಾಂ ಜಿಲ್ಲೆಯನ್ನು ಸೇರಿ ಎಲ್ಲಾ ಜಿಲ್ಲೆಗಳಿಗೂ ಹೆಚ್ಚಿನ ಪ್ರಮಾಣದ ವಿತರಣೆ ಮಾಡಲಾಗುವುದು.

ರಾಜ್ಯದಲ್ಲಿ ಖಾಲಿ ಇರುವ ಮುನ್ಸೀಫರ ಹುದ್ದೆ ಭರ್ತಿ ಬಗ್ಗೆ.

1998. ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ರಾಜ್ಯದಲ್ಲಿ ಖಾಲಿಯಿರುವ ಮುನ್ಸೀಫ್ ಮ್ಯಾಜಿಸ್ಟ್ರೇಟರ್‌ಗಳ ಹುದ್ದೆಗಳ ಸಂಖ್ಯೆ ಎಷ್ಟು :

2) ಈಗಾಗಲೇ ಆಯ್ಕೆ ಮಾಡಿರುವ ಹುದ್ದೆಗಳ ಸಂಖ್ಯೆಯೆಷ್ಟು :

3) ಆಯ್ಕೆ ಮಾಡಿದವರಲ್ಲಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಹಾಗೂ ಭರ್ತಿ ಮಾಡದೇ ಉಳಿದಿರುವ ಹುದ್ದೆಗಳ ಸಂಖ್ಯೆ ಎಷ್ಟು :

4) ಭರ್ತಿ ಮಾಡುವಲ್ಲಿ ಆದ ವಿಳಂಬಕ್ಕೆ ಕಾರಣವೇನು :

5) ಖಾಲಿಯಾಗಿರುವ ಹುದ್ದೆ ತುಂಬಲು ಹಾಗೂ ಆಯ್ಕೆಯಾದವರನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು) :

1) 41.

2) 37.

3) ಉದ್ಭವಿಸುವುದಿಲ್ಲ.

4) ಕಾದಿರಿಸಲಾದ ಮಾಸಲಾತಿ ಹುದ್ದೆಗಳನ್ನು ಭರ್ತಿ ಮಾಡಲಾಗದ ಹೊರತು. ಸಾಮಾನ್ಯ ವರ್ಗದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಲು ಸರ್ಕಾರ ಒಪ್ಪಲಿಲ್ಲ. ಆದ್ದರಿಂದ. ನೇಮಕಾತಿ ನಿಯಮಗಳನ್ನು ಬದಲಾಯಿಸಿ ಭರ್ತಿ ಮಾಡಲು ಕಾಲಾವಕಾಶ ಬೇಕಾಗಿದ್ದರಿಂದ. ವಿಳಂಬವಾಯಿತು.

5) ಇದು ಸರ್ಕಾರದ ತೀರ್ಮ ಪರಿಶೀಲನೆಯಲ್ಲಿದೆ.

ಚೇರ್ಮನ್ : ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಟಿ.ಜಿ. ಜಯಚಂದ್ರ : ಉಪಾಧ್ಯಕ್ಷರೆ. ಬಹಳಷ್ಟು ಪ್ರಶ್ನೆಗಳಿಗೆ ಉತ್ತರಗಳು ಬರುವುದಿಲ್ಲ. ನಾವು ಪ್ರಶ್ನೆಯನ್ನು ಮಂಡಿಸಿದಾಗ. ಅದಕ್ಕೆ ಆಗ ಉತ್ತರ ಇರುವುದಿಲ್ಲ. ನಾವು ಹೋಗಿ ಹುಡುಕಿದರೂ ಸಹ ಉತ್ತರ ಬರುವ ಪ್ರಯತ್ನವಿಲ್ಲ. ಹೀಗೇ ಬಿಟ್ಟರೆ ಅದು ಯಾವಾಗ ಬರುತ್ತದೆ ? ನಮಗೆ ಯಾವ ಪ್ರಶ್ನೆಗಳೆ ಬಹಳ ಪ್ರಮುಖವಾಗಿರುತ್ತವೆ. ಅಂತಹ ಪ್ರಶ್ನೆಗಳು ಅನ್‌ಸ್ಟಾರ್ಡ್ ಆಗುತ್ತವೆ. ಮತ್ತು ಉತ್ತರ ಬರುವುದಿಲ್ಲ.